ಚಂದ್ರಣ್ಣ ಒಂದು ಕ್ಷಣ ಅವನನ್ನು ದಿಟ್ಟಿಸಿದ. ಸಣ್ಣಗೆ ನಕ್ಕು, ಶಾಂತವಾದ ದನಿಯಲ್ಲಿ, "ಎಂಥಾ ವ್ಯವಹಾರದ ಬಗ್ಗೆ ಹೇಳ್ತಿದ್ದೀಯಾ? ಬೇಸಿಗೆಯಲ್ಲಿ ಒಂದು ಹೊತ್ತು ಮಾತ್ರ ಸೋಡಾ ಮಾರಿ ಬಂದ ಹಣದಲ್ಲಿ ನೂರು ಜನ ದೇಶಭಕ್ತರಿಗೆ ಊಟಕೊಟ್ಟಿದ್ದೇನೆ ಗೊತ್ತುಂಟಾ? ಈ ವ್ಯಾಪಾರದಲ್ಲಿ ಲಾಭದ ಬಗ್ಗೆ ನನಗೆ ಹೇಳುತ್ತೀಯಾ? ನನ್ನ ಸರಕು ನಾಲ್ಕಾಣೆಗೆ ಮಾರಿದರೆ ನನಗೆ ಉಳಿಯುವ ಇಪ್ಪತ್ತು ಪೈಸೆ ಬಗ್ಗೆ ಹೇಳುತ್ತಿದ್ದಿಯಾ? ಅಥವಾ ನಿನ್ನ ಸರಕು ನಾಲ್ಕಾಣೆಗೆ ನಾನು ಮಾರಿಕೊಟ್ಟರೆ ನಿನಗೆ ಉಳಿಯುವ ಇಪ್ಪತ್ತು ಪೈಸೆಯ ಬಗ್ಗೆ ಹೇಳುತ್ತಿದ್ದೀಯಾ? ನನ್ನ ಇಪ್ಪತ್ತು ಪೈಸೆ ಈ ನೆಲದಲ್ಲೇ ಇರುತ್ತದೆ. ಆದರೆ ನಿನಗೆ ಉಳಿಯುವ ಇಪ್ಪತ್ತು ಪೈಸೆ ಲಾಭವನ್ನು, ನನ್ನ ದೇಶದ ಜನರ ಹಣವನ್ನು ಯಾರ ದೇಶಕ್ಕೆ ಕೊಂಡು ಹೋಗುತ್ತೀರಾ? ಇದಕ್ಕಾಗಿ ನನ್ನ ದುಡಿಮೆಯನ್ನು, ನನ್ನ ಅಂಗಡಿಯನ್ನು ಬಳಸಿಕೊಂಡು ಅದಕ್ಕೆ ಐದು ಪೈಸೆ ಕೂಲಿ ಕೊಟ್ಟು ಭಯಂಕರ ಲಾಭ ಅನ್ನುತ್ತಿಯಾ. ಇದಕ್ಕೆ ನನ್ನನ್ನ ಒಪ್ಪಿಕೋ ಅಂತ ಹೇಳ್ತಿದ್ದೀಯೋ ಹೇಗೆ?" ಅಂದ ಚಂದ್ರಣ್ಣ ಶಾಂತವಾಗಿ.

ಆತ ಏನೂ ಮಾತನಾಡಲಾಗದೆ ಸುಮ್ಮನಾಗಿಬಿಟ್ಟ. ಸ್ವಲ್ಪ ಹೊತ್ತು ಹಾಗೇ ಕೂತ ಅವನು ಹೊರಡಲು ಎದ್ದುನಿಂತ.

"ತಮ್ಮಾ ಒಂದು ಮಾತು..." ಎಂದು ತಡೆದು ನಿಲ್ಲಿಸಿದ ಚಂದ್ರಣ್ಣ.

"ನಿನಗೆ ತಿಳಿದಿದೆಯೋ ಇಲ್ಲವೋ, ಎರಡು ಶತಮಾನಗಳಿಂದ ಬಿಳಿಯರ ಕಾಲಬುಡಕ್ಕೆ ಸಿಕ್ಕಿ ದಾಸ್ಯದಲ್ಲಿ ನರಳಿದ ಈ ನಾಡನ್ನು ಸಾವಿರಾರು ಮಹಾನುಭಾವರು ಭಯಂಕರ ಕಷ್ಟಗಳನ್ನೆದುರಿಸಿ, ದಾಸ್ಯದಿಂದ ಬಿಡಿಸಿ ನಿಮ್ಮಂಥಾ ಯುವಜನರ ಕೈಗಿತ್ತಿದ್ದಾರೆ. ಇನ್ನು ಮುಂದೆ ಈ ದೇಶಕ್ಕೆ ನಿಮ್ಮ ಕೈಲಾದ ಸೇವೆ ಮಾಡಿರಿ ಆದರೆ ಇಂಥಾ ದ್ರೋಹ ಮಾತ್ರ ಮಾಡಬೇಡಿರಿ" ಅಂದ.

ಆ ಯುವಕ ತಡವರಿಸುತ್ತಾ, "ದ್ರೋಹವಾ?..." ಅಂದ.

"ಹೌದು, ದ್ರೋಹವಲ್ಲದೆ ಮತ್ತಿನ್ನೆಂಥದ್ದು? ಈ ದೇಶದಲ್ಲಿ ಎಂತೆಂಥಾ ನದಿಗಳಿವೆ, ಕಾಲುವೆಗಳಿವೆ, ಗಿಡಮರಗಳಿವೆ ನಿಮಗೆ ಗೊತ್ತುಂಟಾ? ಬಿಸಿಲ ಕಾಲದಲ್ಲಿ ತಂಪಾಗಿಸುವಂಥಾ ಹಣ್ಣು ಹಂಪಲಗಳಿವೆ. ನಮ್ಮ ಹಿರಿಯರ ಕಾಲದಿಂದಲೂ ಒಳ್ಳೊಳ್ಳೆಯ ಬೇರುಗಳಿಂದ ತಯಾರು ಮಾಡಿದ ಶರ್ಬತ್ತುಗಳಿವೆ. ಇಷ್ಟೆಲ್ಲಾ ಇದ್ದಾಗ್ಯೂ ಸಪ್ತ ಸಮುದ್ರಗಳಾಚೆಯಿಂದ ಬಂದ ನಿನ್ನ ಕಂಪನಿ ಇಲ್ಲಿ ವ್ಯಾಪಾರಕ್ಕಾಗಿ ಬಂದಿದೆಯೆಂದರೆ ಎಷ್ಟು ಲಾಭವಿದೆಯೋ ಲೆಕ್ಕ ಹಾಕಿಕೊಂಡಿರಲ್ಲವೇ? ಇಲ್ಲಿಂದ ಎಷ್ಟು ಸಂಪತ್ತು ಕೊಂಡೋಗಬಹುದೋ ಅಂತ ಲೆಕ್ಕ ಹಾಕಿಯೇ ನಿನ್ನಂಥ ಹೊಸ ಯುವಕನಿಗೆ ಕಾರುಕೊಟ್ಟು ಇಲ್ಲಿಯವರೆಗೆ ಕಳುಹಿಸುತ್ತಾರೆ. ಇಂಥಾ ದ್ರೋಹದ ಕೆಲಸಕ್ಕೆ ನಿನ್ನಂಥ ಯುವಕರು ಕೈಜೋಡಿಸಬಹುದೇ?"

ಅವನು ಉತ್ತರ ಕೊಡಲಾಗದೆ ನಿಂತಿದ್ದ. ಅವನು ತಲೆ ತಗ್ಗಿಸಿ, "ಹೋಗಿ ಬರ್ತಿನಿ" ಅಂದು ಹೊರನಡೆದ. ಚಂದ್ರಣ್ಣನೂ ಅಂಗಡಿಯಲ್ಲಿ ಕೂರಲಾಗದೆ ಮನೆಕಡೆ ಹೊರಟ.

ದೇಶದುದ್ದಗಲಕ್ಕೂ ಗಾಂಧೀವಾದಿಗಳಿದ್ದಾರೆ. ಕೋಕಾ–ಕೋಲಾ ದೇಶದೊಳಕ್ಕೆ ಬರುವುದರ ವಿರುದ್ಧ ಪ್ರತಿಭಟನೆಯ ಹೇಳಿಕೆ ನೀಡುತ್ತಿದ್ದಾರೆ. ಇವರ ಮಾತಿಗೆ ಬೆಲೆಕೊಟ್ಟು ಸರ್ಕಾರ ಇದನ್ನು ತಡೆಯುತ್ತದೆ ಅಂದುಕೊಂಡಿದ್ದುಂಟು. ಆದರೆ ಅದು ಸಣ್ಣ ಊರುಗಳು, ಹಳ್ಳಿಗಳಿಗೂ ದಾಳಿಯಿಡುತ್ತಿರುವುದನ್ನು ನೋಡಿ ಆ ನಂಬಿಕೆಯೂ ಹೊರಟು ಹೋಯಿತು.

ಇದಕ್ಕೂ ಮುನ್ನ ಸುತ್ತ ಮುತ್ತಲ ಹಳ್ಳಿಗಳಲ್ಲಿ ತನ್ನಂತೆ ಸೋಡಾ ಅಂಗಡಿ ತೆರೆಯಲು ಪ್ರಯತ್ನಿಸಿದ್ದ ಬಡ ಹಳ್ಳಿಗರಿಗೆ ತನ್ನ ಕೈಲಾದ ಸಹಾಯ ಮಾಡಿದ್ದ. ಇನ್ನು ಮುಂದೆ ಅವರ ಗತಿಯೇನು? ಮನೆಗೆ ಬಂದು ನಡೆದಿದ್ದನ್ನು ಹೆಂಡತಿಗೆ ತಿಳಿಸಿದ. ನೀನು ಮಾಡಿದ್ದು ಸರಿಯಾಗಿದೆ ಅಂದಳು. ಆದರೆ ಮಗ ಏನನ್ನುತ್ತಾನೋ ಅನ್ನೋ ಯೋಚನೆಯಾಯಿತು ಚಂದ್ರಣ್ಣನಿಗೆ.